**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 6597 / 2024**

ಪಿ.ಡಬ್ಲ್ಯೂ :- 02

| | |
|---|---|
| ಹೆಸರು | **ಜಯರಾಮಯ್ಯ** |
| ತಂದೆ ಹೆಸರು | **ಬೆಟ್ಟಸ್ವಾಮಯ್ಯ** |
| ವಯಸ್ಸು | **51 ವರ್ಷ** |
| ವೃತ್ತಿ | **ವ್ಯವಸಾಯ** |
| ವಾಸಸ್ಥಳ | **ಬೆಣ್ಣಪ್ಪನವಾಳ್ಯ** |

**ದಿನಾಂಕಃ 15-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಪಿರ್ಯಾದಿ ಪರ ಶ್ರೀ. ಹೆಚ್.ಟಿ.ಟಿ. ವಕೀಲರಿಂದ** :-

2023ನೇ ಇಸವಿಯಲ್ಲಿ ಪಿರ್ಯಾದಿಯಾದ ಲೋಕೇಶ ರವರ ಅಡಿಕೆ ತೋಟವನ್ನು 10,50,000/- ರೂಪಾಯಿಗೆ ಆರೋಪಿ ಖರೀದಿ ಮಾಡಿದ್ದರು. ಆಗ ಸದರಿ ವ್ಯವಹಾರದಲ್ಲಿ ನಾನು ಸಹ ಬಾಗಿಯಾಗಿರುತ್ತೇನೆ. ಖರೀದಿ ಮಾಡುವ ಸಮಯದಲ್ಲಿ 1,50,000/- ರೂಪಾಯಿಯನ್ನು ಮುಂಗಡವಾಗಿ ನೀಡಿದ್ದರು. ಉಳಿದ ಮೊತ್ತವನ್ನು ದೀಪಾವಳಿಗೆ ಕೊಡುತ್ತೇನೆಂದು ಹೇಳಿದ್ದರು. ಪಿರ್ಯಾದಿದಾರರ ಜಮೀನುಗಳಾದ ಸರ್ವೆ ನಂಬರ್-38 ಮತ್ತು 29/1 ರಲ್ಲಿ ಬೆಳೆದಿದ್ದಂತಹ ಅಡಿಕೆಯನ್ನು ಆರೋಪಿ ಖರೀದಿ ಮಾಡಿರುತ್ತಾರೆ. ನಂತರ ಮೇ-2024 ರಲ್ಲಿ ಆರೋಪಿ ಪಿರ್ಯಾದಿಗೆ ವಿವಾದಿತ ಚೆಕ್ಕನ್ನು ನೀಡಿರುತ್ತಾರೆ. ನಂತರ ಅದನ್ನು ಪಿರ್ಯಾದಿ ತನ್ನ ಬ್ಯಾಂಕಿಗೆ ಹಾಜರು ಪಡಿಸಿದಾಗ ಆರೋಪಿಯ ಬ್ಯಾಂಕಿನಲ್ಲಿ ಹಣ ಇಲ್ಲ ಎಂದು ವಾಪಸ್ಸು ಬಂದಿರುತ್ತದೆ.

**ಪಾಟೀ ಸವಾಲು** :- ಆರೋಪಿ **ಪರ** ಶ್ರೀ. ವಿ.ಕೆ. ವಕೀಲರಿಂದ :-

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಅದರಂತೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ.    ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 6597 / 2024**

ಪಿ.ಡಬ್ಲೂ :- 03

| | |
|---|---|
| ಹೆಸರು | **ಕೃಷ್ಣಮೂರ್ತಿ** |
| ತಂದೆ ಹೆಸರು | **ವೆಂಕಟರಾಯಪ್ಪ** |
| ವಯಸ್ಸು | **55 ವರ್ಷ** |
| ವೃತ್ತಿ | **ವ್ಯವಸಾಯ** |
| ವಾಸಸ್ಥಳ | **ವೀರೂಪಪುರ** |

**ದಿನಾಂಕಃ 15-07-2026** ರಂದು ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಪಿರ್ಯಾದಿ ಪರ ಶ್ರೀ. ಹೆಚ್.ಟಿ.ಟಿ. ವಕೀಲರಿಂದ** :-

2024-25 ಹಾಗೂ 2025-26ನೇ ಸಾಲಿನಲ್ಲಿ ಪಿರ್ಯಾದಿಯಾದ ಲೋಕೇಶನವರ ಅಡಿಕೆ ತೋಟದ ಅಡಿಕೆಯನ್ನು ನಾನು 11,25,000/- ರೂಪಾಯಿಗೆ ಖರೀದಿ ಮಾಡಿರುತ್ತೇನೆ. ಇದನ್ನು ಹೊರತು ಪಡಿಸಿ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನನಗೆ ಇರುವುದಿಲ್ಲ.

**ಪಾಟೀ ಸವಾಲು** :- ಆರೋಪಿ **ಪರ** ಶ್ರೀ. ವಿ.ಕೆ. ವಕೀಲರಿಂದ :-

**ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಅದರಂತೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.